**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು** ಜೆ.ಎಂ.ಎಫ್.ಸಿ ನ್ಯಾಯಾಲಯ,
**ಹರಿಹರ**

<u>ಎಂ. ವಿ. ಸಿ.**25/2016 & 695/2016**</u>

**RW-2**

**ಹೆಸರುಃ** ಸಂಜಯ ಮಾರುತಿ ಲಾಡ್

**ತಂದೆಃ** ಮಾರುತ.

**ವಯಸ್ಸುಃ 53**

**ಕೆಲಸಃ Senior clerk R.T.O, Mumbai Central.**

**ವಾಸಃ Mumbai.**

**ಇಂದು ದಿನಾಂಕ:30-09-2024 ರಂದು** ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ** ಪಿ.ಕೆ.ಎಸ್ **ವಕೀಲರಿಂದ**
**2** ನೇಎದುರುದಾರರ ಪರ**:**

ನಾನು R.T.O Mumbai Central ನಲ್ಲಿ ಹಿರಿಯ ಗುಮಾಸ್ತ ಎಂದು ಕೆಲಸ ಮಾಡುತ್ತಿದ್ದೇನೆ. ನಮ್ಮ ಕಚೇರಿಗೆ ಐ.ಎ ನಂಬರ್-18 ರ ನೋಟೀಸ್ ಬಂದಿರುತ್ತದೆ. ಲೈಸೆನ್ಸ್ ನಂಬರ್-MH 01/386479/2006 ಈ ನಂಬರ್ ನಲ್ಲಿ ಅಬ್ದುಲ್ ರಜಾಕ್ ತಂದೆ ಜಲೀಲ್ ಸಾಬ್ ಇವರ ಹೆಸರಿನಲ್ಲಿ ನಮ್ಮ ಕಚೇರಿಯಲ್ಲಿ ಯಾವುದೇ ಚಾಲನಾ ಪತ್ರವನ್ನು ನೀಡಿಲಾಗಿರುವುದಿಲ್ಲ. ಆ ಕಾರಣದಿಂದ ದೃ.ಪ್ರತಿ ಕೊಟ್ಟಿರುವುದಿಲ್ಲ.

ಸಾಕ್ಷಿಗೆ ನಿ.ಆರ್ -6 ತೋರಿಸಲಾಗಿ ಕೇಳಲು ಸಾಕ್ಷಿ ಅನುಕ್ರಮ ನಂಬರ್-386479 ಇಷ್ಟು ನಂಬರ್ ನಮ್ಮ ಕಚೇರಿಯಿಂದ ತಲುಪಿರುವುದಿಲ್ಲ. ಕೊನೆಯ ನಂಬರ್-76225 ಇದು 2006 ರಲ್ಲಿ ನೀಡಲಾದ ಕೊನೆಯ

RW-2

ಲೈಸೆನ್ಸ್ ನಂಬರ್ ಇರುತ್ತದೆ. ಸಾಕ್ಷಿ ಮೂಲ ಸದರಿ ಅನುಕ್ರಮ ನಂಬರ್-76225 ಇದರ ದಾಖಲಾತಿ ಹಾಜರುಪಡಿಸಿದ್ದು, ಅದನ್ನು ಪರಶೀಲಿಸಿ ಅದರ ದೃ.ನಕಲನ್ನು ನಿ.ಆರ್-7 ಎಂದು ಗುರುತಿಸಾಲಯಿತು. ಸಾಕ್ಷಿಗೆ 2 ನೇ ಎದುರುದಾರರು ಈ ಅರ್ಜಿಯಲ್ಲಿ ಹಾಜರುಪಡಿಸಿದ ದಿನಾಂಕಃ25-03-2021 ರ ಪತ್ರವನ್ನು ತೋರಿಸಿ ಅದರಲ್ಲಿ ನಮ್ಮ ಕಚೇರಿಯ ಸ್ವೀಕೃತಿ ಇರುತ್ತದೆ. ಸದರಿ ಪತ್ರವನ್ನು ನಿ.ಆರ್-8 ಎಂದು ಗುರುತಿಸಲಾಯಿತು.

ದಿನಾಂಕಃ10-05-2019 ರಂದು ನಮ್ಮ ಕಚೇರಿಯಿಂದ ನೀಡಿದ ಪತ್ರವನ್ನು ಗುರುತಿಸುತ್ತಿದ್ದು, ಅದನ್ನು ನಿ.ಆರ್-9 ಎಂದು ಗುರುತಿಸಲಾಯಿತು. ಸದರಿ ದಾಖಲೆ ಪ್ರಕಾರ ಅನುಕ್ರಮ ನಂಬರ್-386479/2006 ಇದು ನಮ್ಮ ಕಚೇರಿಯಲ್ಲಿರುವ ಅನುಕ್ರಮ ನಂಬರ್ ನ ಲೈಸೆನ್ಸಗೆ ಹೊಂದಾಣಿಕೆ ಆಗುವುದಿಲ್ಲ ಎಂದು ಉತ್ತರ ನೀಡಿರುತ್ತೇವೆ. ನಿ.ಆರ್-6 ಲೈಸೆನ್ಸ್ ನಮ್ಮ ಕಚೇರಿಯಿಂದ ನೀಡಲಾಗಿರುವುದಿಲ್ಲ ಆ ಕಾರಣದಿಂದ ಅದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ನನಗೆ ನೀಡಿದ ಅಧಿಕಾರ ಪತ್ರವನು ಹಾಜರುಪಡಿಸಿದ್ದು, ಅದನ್ನು ನಿ.ಆರ್-10 ಎಂದು ಗುರುತಿಸಲಾಯಿತು. ಕೊನೆಯ ಅನುಕ್ರಮ ನಂಬರ್ ನಲ್ಲಿ ವಿಪಿನ್ ಉಪದ್ಯಾಯ ಎನ್ನುವವರಿಗೆ MH-01/2006 - 76225 ರಲ್ಲಿ ಕೊನೆಯ ಲೈಸೆನ್ಸ ನೀಡಲಾಗಿರುತ್ತದೆ.

ಪಾಟೀ ಸವಾಲು ಶ್ರೀ ಜಿ.ಪಿ ವಕೀಲರಿಂದ **1** ನೇ ಎದುರುದಾರರ ಪರಃ

ನ್ಯಾಯಾಲಯದಿಂದ ಬಂದ ಸಾಕ್ಷಿ ಸಮನ್ಸ ಆರ್.ಟಿ.ಓ ಮುಂಬಯಿ ಇವರಿಗೆ ಬಂದಿತ್ತು ಎಂದರೆ ಸರಿ. ನನಗೆ ಸ್ವತಃ ನೋಟೀಸ್ ಬಂದಿಲ್ಲ ಎಂದರೆ ಸರಿ. ಯಾವ ಯಾವ ದಾಖಲೆಗಳನ್ನು ಹಾಜರುಪಡಿಸಲು ನೋಟೀಸ್ ನಲ್ಲಿ ತಿಳಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಹಾಗಾದರೆ ನೀವು

ದಾಖಲೆಗಳನ್ನು ನೋಡದೇ ನ್ಯಾಯಾಲಯಕ್ಕೆ ಬಂದಿದ್ದೀರಾ ಎಂದರೆ ಸಾಕ್ಷಿ ಲೈಸೆನ್ಸ್ ನಂಬರ್ ನೋಡಿರುತ್ತೇನೆ ಎಂದು ಹೇಳುತ್ತಾರೆ. ನಾನು ನಮ್ಮ ಕಚೇರಿಯ ಪೂರ್ಣ ಡಿ.ಎಲ್ ರಿಜೀಸ್ಟರ್ ನ್ನು ಈ ದಿನ ನ್ಯಾಯಾಲಯಕ್ಕೆ ತಂದಿಲ್ಲ. ಸಾಕ್ಷಿ ಆದರೆ ಕೊನೆಯ ಅನುಕ್ರಮ ನಂಬರ್ ನ ಲೈಸೆನ್ಸ್ ರೆಕಾರ್ಡ್ ತಂದಿದ್ದೇನೆ ಎಂದು ಹೇಳುತ್ತಾರೆ. (ಅದು ನಿ.ಆರ್-7 ನ ಮೂಲ ದಾಖಲೆ ಇರುತ್ತದೆ) ಸಾಕ್ಷಿ ಸದರಿ ರಿಜೀಸ್ಟರ್ ದೊಡ್ಡದು ಇದ್ದು, ಆದರೆ ನಿ.ಆರ್-7 ರಂತಹ ದಾಖಲೆಯ ಪ್ರಕಾರ ರಿಜೀಸ್ಟರ್ ಇಡುತ್ತೇವೆ ಎಂದು ಹೇಳುತ್ತಾರೆ. ನಿ.ಆರ್-9 ರಲ್ಲಿ ಈ ನಂಬರ್ ತಾಳೆ ಆಗುತ್ತಿಲ್ಲ ಎಂದು ತಿಳಿಸಿದ್ದು, ಸಾಕ್ಷಿ ಆ ನಂಬರ್ ಇಲ್ಲದೇ ಇರುವ ಕಾರಣ ತಾಳೆ ಆಗಿಲ್ಲ ಎಂದು ಇದೆ ಎಂದು ಹೇಳುತ್ತಾರೆ. ಸಾಕ್ಷಿಗೆ ನಿ.ಆರ್-6 ತೋರಿಸಿ ಅದು ನಮ್ಮ ಕಚೇರಿಯ ಸೀಲ್ ಎಂದರೆ ಸರಿಯಲ್ಲ. ಸಾಕ್ಷಿ ಅನುಕ್ರಮ ನಂಬರ್-386479 ಮುಟ್ಟದೇ ಇರುವ ಕಾರಣ ಇದು ನಮ್ಮ ಸೀಲ್ ಅಲ್ಲ ಎಂದು ಹೇಳುತ್ತಿದ್ದೇನೆ ಎಂದು ಹೇಳುತ್ತಾರೆ. ನಿ.ಆರ್-6 ನ್ನು ನಮ್ಮ ಕಚೇರಿಯಿಂದ ನೀಡಲಾಗಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿ.ಆರ್-6 ನ್ನು ನಮ್ಮ ಕಚೇರಿಯಿಂದ ನೀಡಲಾಗಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಜಿ.ಕೆ.ಡಿ ವಕೀಲರಿಂದ ಅರ್ಜಿದಾರರ ಪರಃ

ಮುಂಬಯಿ ಸೆಂಟ್ರಲ್ ನಲ್ಲಿ ಒಂದು ಕಚೇರಿ ಇದ್ದು, ಅದೇ ರೀತಿ ಮುಂಬಯಿನಲ್ಲಿ ಬೇರೆ ಎರಡು ಆರ್.ಟಿ.ಓ ಕಚೇರಿಗಳು ಇರುತ್ತವೆ. ಮುಂಬಯಿನಲ್ಲಿ ಅಂದೇರಿ, ವಡಲಾ ಗಳಲ್ಲಿ ಆರ್.ಟಿ.ಓ ಕಚೇರಿಗಳು ಇರುತ್ತವೆ. ಮುಂಬಯಿ ಸೆಂಟ್ರಲ್ ನ ನಮ್ಮ ಕಚೇರಿಯಲ್ಲಿ ಮಾತ್ರ ಈ

RW-2

ಅನುಕ್ರಮ ಕುರಿತು ದಾಖಲೆ ಪರಿಶೀಲಿಸಿರುತ್ತೇನೆ. ಕಾರಣ MH-01 ಅನುಕ್ರಮ ನಂಬರ್ ಇದು ಮುಂಬಯಿ ಸೆಂಟ್ರಲ್ ಗೆ ಬರುತ್ತದೆ. ಒಬ್ಬ ಚಾಲಕ ಎಲ್ಲಿಯಾದರೂ ಡಿ.ಎಲ್ ಮಾಡಿಸಬಹುದು ಎಂದರೆ ಸರಿ. ಸಾಕ್ಷಿ ಆದರೆ ವಾಸದ ವಿಳಾಸ ನೋಡಿ ಡಿ.ಎಲ್ ಕೊಡುತ್ತೇವೆ ಎಂದು ಹೇಳುತ್ತಾರೆ. ನಿ.ಆರ್ -6 ಇದನ್ನು ಭೌತಿಕವಾಗಿ ಬರೆದ ಡಿ.ಎಲ್ ಎಂದರೆ ಸರಿ. ಸಾಕ್ಷಿ ಆದರೆ ನಾವು ನೀಡಿಲ್ಲ ಎಂದು ಹೇಳುತ್ತಾರೆ. ಲೈಸೆನ್ಸ್‌ಗಾಗಿ ಸಲ್ಲಿಸಿದ ಅರ್ಜಿ ಕುರಿತು ಸದರಿ ವ್ಯಕ್ತಿಯ ವಿವರ, ವಿಳಾಸ ಮತ್ತು ಯಾರು ಡಿ.ಎಲ್ ನೀಡಿದ್ದಾರೆ ಎಂದು ಅಧಿಕಾರಿ ವಿವರ ಒಂದು ರಿಜೀಸ್ಟರ್ ನಲ್ಲಿ ನಮೂದಿಸುತ್ತೇವೆ ಎಂದರೆ ಸರಿ. ಸದರಿ ರಿಜೀಸ್ಟರ್ ಹಾಜರುಪಡಿಸಲು ನಿಮಗೆ ತೊಂದರೆ ಇಲ್ಲ ಎಂದರೆ ಸಾಕ್ಷಿ ಒಂದು ವೇಳೆ ಲೈಸೆನ್ಸ್ ನೀಡಲಾಗಿದ್ದರೆ ಕೊಡಬಹುದಿತ್ತು ಎಂದು ಹೇಳುತ್ತಾರೆ. ನಿ.ಆರ್-7 ನ್ನು ದಿನಾಂಕ:28-12-2006 ರ ದಿನಾಂಕದ್ದು ಇರುತ್ತದೆ. ನಿ.ಆರ್-6 ಡಿ.ಎಲ್ ಇದು ದಿನಾಂಕ:22-10-2006 ರಂದು ನೀಡಲಾಗಿದೆ ಎಂದರೆ ಸಾಕ್ಷಿ ನಮ್ಮ ಕಚೇರಿಯಿಂದ ನೀಡಲಾಗಿಲ್ಲ ಎಂದು ಹೇಳುತ್ತಾರೆ. ನಾನು ಆರ್.ಟಿ.ಓ ಇಲ್ಲದೇ ಕಾರಣ ನನಗೆ ಈ ಕುರಿತು ಸಾಕ್ಷಿ ಹೇಳಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ವಿಮಾ ಕಂಪನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಉಳಿದ ಪಾಟೀ ಸವಾಲು 1 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.)

3 ನೇ ಎದುರುದಾರರ ಪರ ವಕೀಲರು 1 ನೇ ಎದುರುದಾರರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

RW-2

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**